ಕರ್ನಾಟಕ ವಿಧಾನ ಸಭೆ

ಬುಧವಾರ 7ನೇ ಜನವರಿ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ. ವಿ. ವೆಂಕಟಪ್ಪ) ರವರು

ಪೀಠವನ್ನು ಅಲಂಕರಿಸಿದ್ದರು

1) ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ : ರಾಜ್ಯ ಹಾಗೂ ದೇಶದಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ನಕಲಿ ಛಾಪಾ ಕಾಗದ ಹಗರಣದ ಬಗ್ಗೆ

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಾವು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಇವತ್ತೇನು ನಮ್ಮ ರಾಜ್ಯದಲ್ಲಿ ಹಾಗೂ ಇಡೀ ರಾಷ್ಟ್ರದಲ್ಲಿ ಚರ್ಚೆಯಾಗತಕ್ಕಂಥ ವಿಷಯ, ನಕಲಿ ಛಾಪ ಕಾಗದದ ಕಗರಣದ ಬಗ್ಗೆ, ಅದರಲ್ಲಿ ಮೂರು ಅಪರಾಧಿ ಕರೀಂ ಲಾಲ್ ಅನ್ನುವಂಥ ವ್ಯಕ್ತಿ ಆತನ ಸುತ್ತಲೂ ಏನೇನು ವ್ಯವಹಾರಗಳು ನಡೆದವು ಮತ್ತು ಆತನ ಜೊತೆಗೆ ವ್ಯವಹಾರ ಮಾಡಿದಂಥ ವ್ಯಕ್ತಿಗಳು ಯಾರು? ಇದರ ಬಗ್ಗೆ ಈಗಾಗಲೇ ಹಲವಾರು ವಿಷಯಗಳು ಹೊರಗಡೆ ಬಂದಿವೆ, ಮತ್ತು ಇನ್ನೂ ಹಲವಾರು ವಿಷಯಗಳು ಹೊರಗೆ ಬರುವಂಥವುಗಳು ಇವೆ, ಅದರ ಬಗ್ಗೆ ವ್ಯಾಪಕವಾದಂಥ ಚರ್ಚೆ ಇವತ್ತು ರಾಜ್ಯದಲ್ಲಿ ಹಾಗೂ ರಾಷ್ಟ್ರದಲ್ಲಿ ಆಗುತ್ತಿದೆ. ಹೀಗಾಗಿ ಇದರ ಒಂದು ಆಳ, ಇದರ ಒಂದು ವ್ಯಾಪಕತೆ, ಮತ್ತು ಇದರಲ್ಲಿ ಈ ಒಂದು ಬೃಹತ್ ಹಗರಣದಲ್ಲಿ ಇನ್‌ವಾಲ್ವ್‌ವಾದಂಥ ವ್ಯಕ್ತಿಗಳು ಯಾರು, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಈ ಅವ್ಯವಹಾರ ಮಾಡಲಿಕ್ಕೆ ಆ ಕರೀಂ ಲಾಲ್‌ಗೆ ಯಾವ ರೀತಿ ಸಾಧ್ಯವಾಯಿತು ಮತ್ತು ಯಾವ ರೀತಿಯ ತನಿಖೆಯಿಂದ ಇನ್ನೂ ಹೆಚ್ಚಿಗೆ ಬೆಳಕನ್ನು ಈ ಪ್ರಕರಣಕ್ಕೆ ಕೊಡಲಿಕ್ಕೆ ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕು. ಈಗಾಗಲೇ ಅಂದಾಜು ಮಾಡಿರುವ ಪ್ರಕಾರ ಮೂವತ್ತು ಸಾವಿರ ಕೋಟಿ ರೂ.ಗಿಂತ ಹೆಚ್ಚು ಹಣ ಅವ್ಯವಹಾರ ಈ ಒಂದು ಹಗರಣದಲ್ಲಿ ಆಗಿದೆ ಎಂದು ಒಂದು ತರ್ಕ, ಅದು ಎಲ್ಲಿಯವರೆಗೆ ಹೇಳುತ್ತಿದ್ದಾರೆಂದರೆ ಸುಮಾರು ಅರವತ್ತು ಕೋಟಿ ರೂ. ಗಿಂತಲೂ ಹೆಚ್ಚು ಅವ್ಯವಹಾರ ಈ ಒಂದು ಪ್ರಕರಣದಲ್ಲಿ ಆಗಿದೆ ಎನ್ನುವಂಥದ್ದು ನಮ್ಮ ಕಣ್ಣು ಮುಂದೆ ಬರುವಂಥದ್ದು. ಈಗಾಗಲೇ ಕೆಲವೊಂದು ಕಾಗದ ಪತ್ರಗಳು ಹೊರಗೆ ಬಂದಿವೆ. ಇತ್ತೀಚಿಗೆ ನಾವೇ ಭಾರತೀಯ ಜನತಾ ಪಾರ್ಟಿಯವರು ಹೊರಗೆ ಬಿಟ್ಟಂಥ ಕಾಗದದ ಬಗ್ಗೆ ಇವತ್ತು ಚರ್ಚೆಯಾಗುತ್ತಿದೆ. ಹೀಗಾಗಿ ಇದರ ಬಗ್ಗೆ ವ್ಯಾಪಕವಾದಂಥ ಒಂದು ಚರ್ಚೆ ಈ ಸದನದಲ್ಲಿ ಆಗಬೇಕು. ಮತ್ತು ರಾಜ್ಯ ಸರ್ಕಾರದ ಕಡೆಯಿಂದ ಇದರ ಬಗ್ಗೆ ಏನು ಕ್ರಮಗಳನ್ನು ಕೈಗೊಂಡಿದ್ದೀರಿ? ಏನು ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು, ಏಕೆ ಇನ್ನು ತೀವ್ರಗತಿಯಲ್ಲಿ ಕ್ರಮಗಳನ್ನು ಕೈಗೊಳ್ಳಲು ಹಿಂದೇಟು ಆಯಿತು? ಇದರ ಬಗ್ಗೆಯೂ ಸಹಿತ ಸಾಕಷ್ಟು ಚರ್ಚೆಯನ್ನು ನಾವು ಇಲ್ಲಿ ಮಾಡಬೇಕಾಗಿದೆ. ಹೀಗಾಗಿ ಇದರ ವ್ಯಾಪಕತೆಯನ್ನು ಅರ್ಥಮಾಡಿಕೊಂಡು ಮತ್ತು ಇದರ ಒಂದು ಚರ್ಚೆ ಬಹಳ ಅತಿ ಜರೂರು ಇರುವುದರಿಂದ, ಮತ್ತು ಇದರಲ್ಲಿ ಸಾರ್ವಜನಿಕ ಹಿತಾಸಕ್ತಿ ಅಡಗಿದ್ದರಿಂದ

ಈ ವಿಷಯವನ್ನು ಚರ್ಚೆ ಮಾಡಲಿಕ್ಕೆ ನಮ್ಮ ಪಕ್ಷದ ಪರವಾಗಿ ಇವತ್ತು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದೇವೆ. ಹೀಗಾಗಿ ಈ ನಿಲುವಳಿ ಸೂಚನೆ ಮಂಡನೆ ಮಾಡುವ ಹಿನ್ನೆಲೆ ಮತ್ತು ಆ ಕರೀಂಲಾಲನ ಹಿನ್ನೆಲೆ, ಆತನಿಗೆ ಸಂಬಂಧಪಟ್ಟಂಥ ವ್ಯಕ್ತಿಗಳು, ಆತನ ವ್ಯವಹಾರದಲ್ಲಿ ಭಾಗಿಯಾಗಿದ್ದಂಥ ವ್ಯಕ್ತಿಗಳು ರಾಜ್ಯ ಸರ್ಕಾರ ಇಲ್ಲಿಯವರೆಗೆ ಕೆಲವೊಂದು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಹಿಂದೇಟು ಹಾಕಿತ್ತು, ಇದರ ಬಗ್ಗೆ ಕೆಲವೊಂದು ವಿಷಯಗಳನ್ನು ನಾನು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಒಟ್ಟಿನಲ್ಲಿ ಈ ವಿಷಯವನ್ನು ಡಿಸ್‌ಕಷನ್ ತೆಗೆದುಕೊಳ್ಳಬೇಕು ಅಂಥ ಒಟ್ಟಾರೆ ಡಿಟೇಲ್ಸ್ ಆಮೇಲೆ ಹೇಳಿ, ನಾನು ಅಲೋ ಮಾಡಿದ ಮೇಲೆ ಅಥವಾ ಮಾಡದಿದ್ದರೆ ಏನಾಗುತ್ತದೆ ಆಮೇಲೆ ನೋಡಿಕೊಳ್ಳೋಣ, ಒಟ್ಟಾರೆ ಈ ವಿಷಯವನ್ನು ಡಿಸ್‌ಕಷನ್‌ಗೆ ತೆಗೆದುಕೊಳ್ಳಬೇಕು ಎನ್ನುವುದು ಅಷ್ಟೇ ತಾನೇ? ಈ ವಿಷಯವನ್ನು ಡಿಸ್‌ಕಷನ್‌ಗೆ ತೆಗೆದುಕೊಳ್ಳಬೇಕು ಎನ್ನುವುದು, ಪ್ರಿಲಿಮಿನರಿ ಸಬ್‌ಮಿಷನ್, ನನಗೆ ಅರ್ಥವಾಗಿದೆ, ನಾನು ಓದಿದ್ದೇನೆ ನೀವು ಹೇಳಿದ್ದೀರಿ ಅರ್ಥವಾಗಿದೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ನಮ್ಮ ಪಕ್ಷದವರೂ ಕೂಡ ಇದರ ಬಗ್ಗೆ ನೋಟೀಸ್ ಕೊಟ್ಟಿದ್ದೇವೆ. ನಾವೂ ಸಹ ಮಾತನಾಡಬೇಕು.

ಅಧ್ಯಕ್ಷರು : ಗೊತ್ತು, ತಾವು ಕೊಟ್ಟಿದ್ದೀರಿ, ಜೆಡಿ (ಎಸ್) ನವರು ಕೊಟ್ಟಿದ್ದಾರೆ, ಆಲ್‌ರೈಟ್ ಎಲ್ಲರೂ ಐದೈದು ನಿಮಿಷ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ ನಾವು ಹೇಳತಕ್ಕಂಥದ್ದು ನಿಲುವಳಿ ಸೂಚನೆ ಬಗ್ಗೆ ಇದೊಂದು ಬಹಳ ಪ್ರಮುಖವಾಗಿರತಕ್ಕಂಥ ಪ್ರಕರಣ, ಎಲ್ಲಾ ಸದಸ್ಯರೂ ಸಹಿತ ಇದರ ಬಗ್ಗೆ ಬೆಳಕನ್ನು ಚೆಲ್ಲಬೇಕು ಮತ್ತು ಇದು ತ್ವರಿತ ಗತಿಯಲ್ಲಿ ತನಿಖೆಯಾಗಬೇಕು, ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು, ಈ ಹಗರಣ ನಿಲ್ಲಬೇಕು ಎನ್ನುವುದು ನಮ್ಮೆಲ್ಲರ ಆಗ್ರಹ. ಅದರಿಂದಾಗಿ ತಾವು ಪ್ರಶ್ನೋತ್ತರ ವೇಳೆಯನ್ನು ರದ್ದುಪಡಿಸಿ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ದಯಮಾಡಿ ಅವಕಾಶ ಮಾಡಿಕೊಡಬೇಕೆಂದು ನಾವು ನಿಮಗೆ ಒತ್ತಾಯ ಮಾಡುತ್ತಿದ್ದೇವೆ.

ಅಧ್ಯಕ್ಷರು : ಮೂರು ಪಕ್ಷದವರು ನೋಟೀಸ್ ಕೊಟ್ಟಿದ್ದಾರೆ, ನೀವು ಬ್ರೀಪ್ ಆಗಿ ಐದೈದು ನಿಮಿಷ ಮಾತನಾಡಿ, Then I will give my decision ನಿಮ್ಮ ನೋಟೀಸ್‌ಲ್ಲಿ ಎಲ್ಲಾ ಪೂರಾ ಇದೆ ನಾನು ಓದಿದ್ದೇನೆ, ನೀವು ಈಗಲೇ ಡೀಟೇಲ್ಸ್ ಹೇಳಿಬಿಟ್ಟರೆ ಆಮೇಲೆ ಡೀಟೇಲ್ಸ್ ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಪ್ರಿಲಿಮಿನರಿ ಸಬ್‌ಮಿಷನ್‌ನಲ್ಲಿ ನಾವು ಕೆಲವೊಂದು ವಿಚಾರಗಳನ್ನು ಹೇಳಿದಾಗ ತಾವು ಕನ್‌ವಿನ್ಸ್ ಆಗುವುದಕ್ಕೆ ಸಾಧ್ಯ. ಇಲ್ಲದಿದ್ದರೆ ತಮಗೆ ಕನ್‌ವಿನ್ಸ್ ಆಗುವುದಿಲ್ಲ, ಸನ್ಮಾನ್ಯ ಅಧ್ಯಕ್ಷರೆ, ತಮ್ಮನ್ನು ನಾವು ಕನ್‌ವಿನ್ಸ್ ಮಾಡಬೇಕಲ್ಲವೆ? ಏಕೆಂದರೆ, ಐದು ನಿಮಿಷದಲ್ಲಿ ಎಲ್ಲವನ್ನೂ ಎಕ್ಸ್‌ಪ್ಲೇನ್ ಮಾಡಿ ಎಂದರೆ ಹೇಗೆ?

ಅಧ್ಯಕ್ಷರು : ಸಮಯವನ್ನು ಉಳಿಸೋಣ ಅಂತಾ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ಐದು ನಿಮಿಷವೆಂದು ದಯವಿಟ್ಟು ರಿಸ್ಟ್ರಿಕ್ಷನ್ ಹಾಕಬೇಡಿ.

ಶ್ರೀ ಎ. ರಾಮದಾಸ್ : ಎಂಥಾ ಪ್ರಕರಣ ಇದು, ಇಡೀ ದೇಶವೇ ಅಲ್ಲೋಲ ಕಲ್ಲೋಲ ಆಗಿದೆ.

ಅಧ್ಯಕ್ಷರು : ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ ಅವರಿಗೆ ದಯವಿಟ್ಟು ಅವಕಾಶ ಮಾಡಿಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ಆ ಸ್ಥಾನದಿಂದ ಒಬ್ಬೊಬ್ಬರು ಐದು ನಿಮಿಷ ಮಾತನಾಡಿ ಎಂದು ಹೇಳಿಬಿಟ್ಟರೆ?.....

ಅಧ್ಯಕ್ಷರು : ನೋ ನೋ ನಾನು ನಿಮ್ಮ ನಾಯಕರಿಗೆ ಹೇಳುತ್ತಿರುವುದು ನಿಮಗಲ್ಲ.

ಶ್ರೀ ಬಿ. ಸೋಮಶೇಖರ್ : ನಾನು ತಮ್ಮ ಅಭಿಪ್ರಾಯವನ್ನು ಒಪ್ಪುತ್ತೇನೆ. ಟೈಂ ಅನ್ನು ಅನಾವಶ್ಯಕವಾಗಿ ವ್ಯರ್ಥ ಮಾಡುವುದು ಬೇಡ. ಉಳಿಸೋಣವೆಂದು ತಾವು ಹೆಳುತ್ತೀರಿ.

ಅಧ್ಯಕ್ಷರು : ಹೌದು. I may allow or I will not allow ಎರಡರಲ್ಲಿ ಒಂದು.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ನನ್ನ ಸಲಹೆ ಏನೆಂದರೆ, ನಾವು ನಮ್ಮ ನಮ್ಮ ಕರ್ತವ್ಯದ ರೂಪದಲ್ಲಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ, ಸರ್ಕಾರ ನಿಲುವಳಿ ಸೂಚನೆಯ ರೂಪದಲ್ಲಿ ತೆಗೆದುಕೊಳ್ಳತಕ್ಕಂಥದ್ದು ನಮಗೇನೂ ಅನುಮಾನವಿದೆ, ತಾವು ಒಂದೇ ಸಾರಿ ಇದನ್ನು ನಿಯಮ 69 ಕ್ಕೆ ಪರಿವರ್ತನೆ ಮಾಡಿ ಈಗಲೇ ಪ್ರಾರಂಭ ಮಾಡುತ್ತೇವೆ ಎನ್ನುವುದಾದರೆ ಒಳ್ಳೆಯದು. ಒಂದು ವೇಳೆ ತಾವು ನಿಲುವಳಿ ಸೂಚನೆಗೆ ಒಪ್ಪುವುದಾದರೆ ಬಹಳ ಸಂತೋಷ ಟೈಂ ಸೇವ್ ಮಾಡುವುದಕ್ಕೋಸ್ಕರ ಇಲ್ಲ ಅದಕ್ಕೆ ಅವಕಾಶ ಕೊಡಲ್ಲ ಎಂದರೆ, ಆಯಿತು ಸರ್ಕಾರ ನಿಯಮ 69ರಲ್ಲಿ ಚರ್ಚೆ ಮಾಡಲು ಒಪ್ಪಲಾಗಿದೆ ಎನ್ನುವುದಾದರೆ ಪ್ರಾರಂಭ ಮಾಡಿಬಿಡಿ. Keeping all other proceedings aside you start the proceedings on Rule 69.

ಶ್ರೀ ಸಿ. ಆರ್. ಸಗೀರ್ ಅಹಮದ್ : ತಾವು ಅವಕಾಶ ಕೊಡುತ್ತೇನೆಂದು ಹೇಳಿದ ಮೇಲೂ ತಮಗೆ ಚರ್ಚೆಗೆ ಅವಕಾಶ ಕೊಡಿ ಎಂದು ಹೇಳುತ್ತೀರಿ.

ಅಧ್ಯಕ್ಷರು : ಪ್ರಶ್ನೋತ್ತರ ಮುಗಿದ ಮೇಲೆ ಅವಕಾಶ ಕೊಡುತ್ತೇನೆಂದು ತಾವು ಹೇಳುತ್ತಿದ್ದೀರ.

ಶ್ರೀ ಆರಗ ಜ್ಞಾನೇಂದ್ರ : ಇಲ್ಲ ಆ ರೀತಿ ಹೇಳಲಿಲ್ಲ.

ಅಧ್ಯಕ್ಷರು : ಇಲ್ಲ ಆ ರೀತಿ ಅಲ್ಲ.

ಶ್ರೀ ಎ. ರಾಮದಾಸ್ : ಬಹಳ ಪ್ರಮುಖವಾದಂಥ ಅಂಶ ಇಡೀ ರಾಜ್ಯ ತಲ್ಲಣಗೊಳಿಸುವ ವಿಚಾರ.

Mr. Speaker : No. No I may allow or I may not allow.

ಶ್ರೀ ಎ. ರಾಮದಾಸ್ : ಇಡೀ ರಾಷ್ಟ್ರದ ವಿಷಯಕ್ಕೆ ಪ್ರಶ್ನೋತ್ತರ ಬದಿಗೊತ್ತಿ ಅವಕಾಶ ಕೊಡಬೇಕೆಂದು ಕೇಳುತ್ತಿದ್ದೇವೆ.

ಅಧ್ಯಕ್ಷರು : ಮಾನ್ಯ ಶೆಟ್ಟರ್‌ರವರೇ, ಮಾನ್ಯ ಸೋಮಶೇಖರ್‌ರವರು ಏನು ಸಲಹೆ ಕೊಟ್ಟರು ಆ ಸಲಹೆ ಬಗ್ಗೆ ನೀವು ಏನು ಹೇಳುತ್ತೀರಿ?

ಶ್ರೀ ಡಿ.ವಿ. ಸದಾನಂದಗೌಡ : ಸರ್ಕಾರ ನಿಲುವಳಿ ಸೂಚನೆ ತೆಗೆದುಕೊಳ್ಳುವುದಕ್ಕೆ ತಯಾರಿದೆ ಎಂದು ಅವರು ಹೇಳುತ್ತಿದ್ದಾರಲ್ಲಾ ಸ್ವಾಮಿ.

ಶ್ರೀ ಸಿ. ಆರ್. ಸಗೀರ್ ಅಹಮದ್ : ನೋ, ನೋ, ಅದು ಅಧ್ಯಕ್ಷರ ವಿವೇಚನೆಗೆ ಬಿಟ್ಟ ವಿಚಾರ. ಸದನದ ನಡವಳಿಕೆಗಳಿಗೆ ಅಧ್ಯಕ್ಷರೇ ಅದರ ತೀರ್ಮಾನ ತೆಗೆದುಕೊಳ್ಳುವವರು, ಅವರು ಹೇಳುತ್ತಿದ್ದಾರೆ, ಪ್ರಶ್ನೋತ್ತರ ಮುಗಿಸಿಯೆಂದು.

ಶ್ರೀ ಬಿ. ಸೋಮಶೇಖರ್ : ಸಂಪೂರ್ಣ ಚರ್ಚೆಗೆ ಅವಕಾಶ ಕೊಡಬೇಕು ಆದುದರಿಂದ ಪ್ರಶ್ನೋತ್ತರವನ್ನು ತಡೆಹಿಡಿದು ಈಗಲೇ ತೆಗೆದುಕೊಳ್ಳಬೇಕೆಂಬುದೇ ನನ್ನ ಆಗ್ರಹ ಇಷ್ಟೇ ಯಾವ ರೂಪದಲ್ಲಿ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು : ಮಾನ್ಯ ಶೆಟ್ಟರ್‌ರವರೇ, ಈಗ ಅವರೊಂದು ಸಲಹೆ ಹೇಳಿದ್ದಾರೆ ಅರ್ಥವಾಯಿತು ತಾನೇ, ಈಗ ಅವರ ಸಲಹೆ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿದರೆ ನಾನು ಸರ್ಕಾರವನ್ನು ಕೇಳುತ್ತೇನೆ, ನಾನು ಸರ್ಕಾರದವರನ್ನು ಕೇಳಬೇಕಲ್ಲವೇ? ಅವರನ್ನು ಕೇಳಿ ತಾನೇ ನಾನು ನಿರ್ಧಾರ ತೆಗೆದುಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ನಮ್ಮ ಉದ್ದೇಶ ಏನೆಂದರೆ, ನಿಲುವಳಿ ಸೂಚನೆ ಬದಲಾಗಿ ನಾವು ನಿಯಮ 60ರ ರೂಪದಲ್ಲಿಯೇ ಕೊಡಬಹುದಾಗಿತ್ತು, ಆದರೆ ನಿಲುವಳಿ ಸೂಚನೆಯನ್ನು ಏಕೆ ಕೊಟ್ಟಿದ್ದೇವೆ ಎಂದರೆ, ಇವತ್ತು ಪ್ರಶ್ನೋತ್ತರ, ಇನ್ನಿತರ ಬಿಜಿನೆಸ್ ಎಲ್ಲವನ್ನೂ ಬದಿಗೊತ್ತಿ ಇದೇ ವಿಷಯದ ಬಗ್ಗೆ ತಕ್ಷಣವೇ ಚರ್ಚೆ ಆರಂಭವಾಗಬೇಕು, ಈ ಒಂದು ವಿಷಯಕ್ಕೆ ಇರುವಂಥ ಮಹತ್ವ, ಅದಕ್ಕಾಗಿ ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಅದಕ್ಕಾಗಿ ನಿಲುವಳಿ ಸೂಚನೆಯ ಮೇಲೆ ಚರ್ಚೆ ಪ್ರಾರಂಭ ಮಾಡೋಣ, ಆಮೇಲೆ ಅದು ನಿಮ್ಮ ಅಧಿಕಾರಕ್ಕೆ ಬಿಟ್ಟಿದ್ದು, ಅದಕ್ಕಾಗಿ ನಾವು ಏನು ನಿಲುವಳಿ ಸೂಚನೆ ಕೊಟ್ಟಿದ್ದೇವೆ ಅದರ ಮೇಲೆ ಚರ್ಚೆ ಪ್ರಾರಂಭ ಮಡುತ್ತೇವೆ ತಾವು ಅದಕ್ಕೆ ಅವಕಾಶ ಕೊಡಿ, ಇಂಥ ಮಹತ್ವದ ಚರ್ಚೆ ಇರುವಂಥ ಸಂದರ್ಭದಲ್ಲಿ ಪ್ರಶ್ನೋತ್ತರ ಅವಧಿಯನ್ನು ಬದಿಗೊತ್ತಿ ಚರ್ಚೆ ಮಾಡುವಂಥದ್ದು, ಸಾಕಷ್ಟು ಇಂಥ ಪ್ರಸಂಗಗಳು ಆಗಿವೆ. ಪಾರ್ಲಿಮೆಂಟ್‌ನಲ್ಲಿ ನಮ್ಮ ರಾಜ್ಯ ವಿಧಾನ ಸಭೆಯಲ್ಲಿ ಸಾಕಷ್ಟು ಸಲ ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಇಂಥ ವಿಚಾರವನ್ನು ಚರ್ಚೆ ಮಾಡಿರುವುದು ಸಾಕಷ್ಟು ಸಂಪ್ರದಾಯ ಇವೆ. ಹೀಗಾಗಿ ಈ ಒಂದು ಪ್ರಶ್ನೋತ್ತರ ಅವಧಿಯನ್ನು ಬದಿಗೊತ್ತಿ ಈ ಒಂದು ಚರ್ಚೆ ಪ್ರಾರಂಭ ಮಾಡುವಂಥದ್ದು ಇದೆ. ನಾನು ಚರ್ಚೆಯನ್ನು ಪ್ರಾರಂಭ ಮಾಡುತ್ತೇನೆ ಆಮೇಲೆ ನೀವು ಮುಂದೆ ತಮ್ಮ ತೀರ್ಮಾನ ಕೊಡಿ.

ಅಧ್ಯಕ್ಷರು : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ ಅವರು ನಿಲುವಳಿ ಸೂಚನೆ ಮೂವ್ ಮಾಡಿದ್ದಾರೆ ಅಲ್ಲವೇ? ಸರ್ಕಾರದವರು ಏನು ಹೇಳುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ಆದರೆ, ಇದನ್ನು ಯಾವರೀತಿಯಾಗಿ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನತಕ್ಕಂಥ ತೀರ್ಮಾನ ತಮಗೆ ಬಿಟ್ಟಿದ್ದು. ಯಾವ ರೀತಿಯಲ್ಲಿ ಅವಕಾಶ ಕೊಡಬೇಕು ಅದು ತಮಗೆ ಬಿಟ್ಟಿದ್ದು ಈ ವಿಷಯವನ್ನು ಪ್ರಶ್ನೋತ್ತರ ವೇಳೆ ಆದನಂತರ ತೆಗೆದುಕೊಂಡರೂ ನಾವು ಚರ್ಚೆಗೆ ಸಿದ್ಧರಿದ್ದೇವೆ. ಅಥವಾ ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಹಿಂದೆ ಈ ರೀತಿಯಾದ ಪ್ರಿಸಿಡೆಂಟ್ ಇದ್ದರೆ ಕಾನೂನಿನಲ್ಲಿ ಅವಕಾಶವಿದ್ದರೆ, ಅದು ತಮಗೆ ಬಿಟ್ಟಿದ್ದು.

ಶ್ರೀ ಬಿ. ಸೋಮಶೇಖರ್ : ನಿಲುವಳಿ ಸೂಚನೆಯಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ಮೊದಲು ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ರೀತಿಯಾದ ಮಹತ್ವವಾದಂಥ ವಿಷಯ ಬಂದಾಗ ಅನೇಕ ಸಾರಿ ಈ ಸದನದಲ್ಲಿ ನಿಲುವಳಿ ಸೂಚನೆಯನ್ನು ಕನ್ವರ್ಟ್ ಮಡಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅದೇ ರೀತಿಯಾಗಿ ಇದಕ್ಕೂ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಈ ವಿಷಯದ ಮೇಲೆ ಎರಡು ಮೂರು ದಿವಸ ಪೂರ್ಣವಾಗಿ ಚರ್ಚೆ ಮಾಡೋಣ.

ಅಧ್ಯಕ್ಷರು : ಈ ವಿಷಯವನ್ನು ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಇದಕ್ಕೆ ಸರ್ಕಾರದವರು ಕೂಡ ಒಪ್ಪಿಕೊಂಡಿದ್ದಾರೆ. I have converted under rule 69. you can commence.

ಶ್ರೀ ಎ. ರಾಮದಾಸ್ : ನಿಲುವಳಿ ಸೂಚನೆ ಅಡಿಯಲ್ಲಿ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಸರ್ಕಾರವೇ ಒಪ್ಪಿಕೊಂಡಿರುವಾಗ, ಇದಕ್ಕೆ ಆಡಳಿತ ಪಕ್ಷದ ಕಡೆಯವರೂ ಕೂಡ ವೋಟು ಮಾಡುತ್ತಾರೆ. Let them vote. ಇದು ಇಡೀ ದೇಶಕ್ಕೆ ಸಂಬಂಧಪಟ್ಟಂಥ ವಿಚಾರವಾಗಿದೆ. ಆದ್ದರಿಂದ ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ನಿಯಮ 69ರಡಿಯಲ್ಲಿ ಚರ್ಚೆ ಮಾಡಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾವು ನಿಯಮ 69ರ ಅಡಿಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಇದರ ಪರವಾಗಿ ಕಾಂಗ್ರೆಸ್‌ನವರೂ ಕೂಡ ವೋಟು ಮಾಡುತ್ತಾರೆ. ಆದ್ದರಿಂದ ಈ ವಿಷಯವನ್ನು ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಕು. ಇದಕ್ಕೆ ಸರ್ಕಾರದವರೇ ಒಪ್ಪಿಕೊಂಡಿದ್ದರೂ ಕೂಡ ತಾವೇಕೆ ನಿಯಮ 69ರ ಅಡಿಯಲ್ಲಿ ತೆಗೆದುಕೊಳ್ಳುತ್ತಿದ್ದೀರಿ? Let then vote for that. ಈ ದೇಶದ ಮೇಲೆ ಭಕ್ತಿ ಇದ್ದವರೆಲ್ಲರೂ ಕೂಡ ಇದಕ್ಕೆ ವೋಟು ಹಾಕುತ್ತಾರೆ. ಆದ್ದರಿಂದ ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

Mr. Speaker : You please hear me ನನ್ನ ಹತ್ತಿರ ಒಂದು ರೂಲಿಂಗ್ ಇದೆ. ಇದನ್ನು ನಾನು ಓದುತ್ತೇನೆ. ಆನಂತರ ಏನು ಮಾಡಬೇಕೆಂದು ತಾವೇ ಹೇಳಿ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

Mr. Speaker : No I have converted it under Rule 69.ನನಗೆ ಅರ್ಥವಾಗಿದೆ. ಇಲ್ಲಿ ಸಮಯ ವೇಸ್ಟ್ ಮಾಡುವುದು ಬೇಡ. ನಿಯಮ 69ರ ಅಡಿಯಲ್ಲಿ ಸದರಿ ವಿಷಯದ ಮೇಲೆ ಚರ್ಚೆ ಪ್ರಾರಂಭ ಮಾಡಿ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡಿ. ಏಕೆಂದರೆ, ಈ ವಿಷಯ ದೇಶದಲ್ಲಿರತಕ್ಕಂಥವರಿಗೆಲ್ಲಾ ಗೊತ್ತಾಗಬೇಕಾಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ನಾವು ಹೇಳತಕ್ಕಂಥದ್ದನ್ನು ಸ್ವಲ್ಪ ಕೇಳಬೇಕು.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಮಗೂ ಕೂಡ ಅವಕಾಶ ಕೊಡಬೇಕು. ಇಲ್ಲದಿದ್ದರೆ ನಾವು ಕೊಟ್ಟಿರತಕ್ಕಂಥ ನೋಟೀಸ್ ಅನಾವಶ್ಯಕವಾಗುತ್ತದೆ.

ಶ್ರೀ ಎ. ರಾಮದಾಸ್ : ಈ ವಿಷಯವನ್ನು ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಹೆದರಿಕೆ ಇಲ್ಲದಿದ್ದರೆ ಇದಕ್ಕೆ ಒಪ್ಪಿಕೊಳ್ಳಿ

(ಗೊಂದಲ)

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಸರ್ಕಾರ ಈ ವಿಷಯವನ್ನು ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಒಪ್ಪಿಕೊಳ್ಳಬೇಕು. ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆಗೆ ತೆಗೆದುಕೊಂಡರೆ ಮಾತ್ರ ವೋಟಿಂಗ್ ಆಗುತ್ತದೆ. ಈ ದೇಶದ ಮೇಲೆ ಭಕ್ತಿ ಇದ್ದವರು ಇದರ ಪರವಾಗಿ ವೋಟು ಕೊಡುತ್ತಾರೆ. ಆದ್ದರಿಂದ ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಸರ್ಕಾರ ಹೆದರುತ್ತಿದೆ.

ಶ್ರೀ ಸಿ.ಆರ್. ಸಗೀರ್ ಆಹಮದ್ : ಮಾನ್ಯ ಅಧ್ಯಕ್ಷರೆ ಬಿ.ಜೆ.ಪಿ. ಯವರು ರಾಜಕಾರಣ ಮಾಡುತ್ತಿದ್ದಾರೆ. ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ. ಮತ್ತೆ ಈ ವಿಷಯವನ್ನು ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ತಾವು ರೂಲಿಂಗ್ ಸಹ ಕೊಟ್ಟಿದ್ದೀರಿ. ಆದರೆ ತಾವು ಕೊಟ್ಟಿರತಕ್ಕಂಥ ರೂಲಿಂಗ್‌ಗೆ ಅವರು ಅಬ್ಜಕ್ಷನ್ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಬಿ.ಜೆ.ಪಿ.ಯವರು ರಾಜಕಾರಣ ಮಾಡುತ್ತಿದ್ದಾರೆಂದು ಅವರು ಹೇಳುತ್ತಿದ್ದಾರೆ. ಆದರೆ, ಕಳೆದ ಎರಡು ವರ್ಷಗಳಿಂದ ಅವರೇನು ಮಾಡುತ್ತಿದ್ದಾರೆ/ ಸಿ.ಬಿ.ಐ.ಗೆ ಒಪ್ಪಿಸಿ ಎಂದು ಹೇಳಿದರೂ ಕೂಡ ಅವರು ಇನ್ನೂ ಒಪ್ಪಿಸಿಲ್ಲ. ಆದ್ದರಿಂದ ಯಾವುದು ರಾಜಕಾರಣ ಎನ್ನತಕ್ಕಂಥದ್ದನ್ನು ತಾವು ದಯವಿಟ್ಟು ಹೇಳಬೇಕು.

(ಗೊಂದಲ)

ಶ್ರೀ ಎ. ರಾಮದಾಸ್ : ಸರ್ಕಾರಕ್ಕೆ ತಾಕುತ್ತಿದ್ದರೆ ನಿಲುವಳಿ ಸೂಚನೆ ಚರ್ಚೆಗೆ ಒಪ್ಪಿಕೊಳ್ಳಲಿ,

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮುಖ್ಯ ಅಪರಾಧಿಯನ್ನು ಹಜ್ ಯಾತ್ರೆಗೆಂದು ವಿದೇಶಕ್ಕೆ ಕಳುಹಿಸಿಕೊಟ್ಟಿದ್ದಾರೆ. ಮತ್ತೆ ಇದಕ್ಕೆ ಸಂಬಂಧಪಟ್ಟಂಥ ಎಲ್ಲಾ ಸಾಕ್ಷಿಗಳನ್ನು ಮುಚ್ಚಿ ಹಾಕಿದ್ದಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇದರ ಅರ್ಥ ಏನೆಂದರೆ ಅವರೇ ಕಾಲು ಕರೆದುಕೊಂಡು ಜಗಳಕ್ಕೆ ಬರುತ್ತಿದ್ದಾರೆ. ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆಂದು ಹೇಳಿದ್ದೇವೆ. ಆದ್ದರಿಂದ, ಇದನ್ನು ಯಾವ ಫಾರ್ಮಾಲಿಟಿ ಮೇಲೆ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದು ತಮಗೆ ಬಿಟ್ಟಿದ್ದು. ತಾವು ಹೇಳಿರತಕ್ಕಂಥದ್ದಕ್ಕೆ ಅವರು ಪ್ರಶ್ನೆ ಮಾಡುತ್ತಾರೆಂದರೆ ಏನರ್ಥ?

(ಗೊಂದಲ)

Mr. Speaker : You please hear me. ನಾನು ಹೇಳತಕ್ಕಂಥದ್ದನ್ನು ತಾವೆಲ್ಲರೂ ದಯವಿಟ್ಟು ಒಂದು ನಿಮಿಷ ಕೇಳಿ. ದಯವಿಟ್ಟು ಎಲ್ಲರೂ ಕುಳಿತುಕೊಂಡು ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ ಈಗಾಗಲೇ ಅನೇಕಸಲ ನನ್ನ ಕಛೇರಿಯಲ್ಲಿ ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆ

ಮಾಡತಕ್ಕಂಥ ವಿಷಯವನ್ನು ಕನ್ಸರ್ಟ್ ಮಾಡಿ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿರತಕ್ಕಂಥ ಉದಾಹರಣೆಗಳು ಸಾಕಷ್ಟಿವೆ. ಆದ್ದರಿಂದ ನಾನು ಹೇಳತಕ್ಕಂಥದ್ದನ್ನು ಕೇಳಿ. ದಯವಿಟ್ಟು ಯಾರು ಗಲಾಟೆ ಮಾಡಬೇಡಿ.

"Chairs Ruling: Chairs ruling should be accepted whether it is right or worng.

On 16th August 1969, the hon, Member Sri. H. Siddaveerappa enquired whether there was any remedy for the House if a wrong ruling was given by the Chair. The Hon. Speaker thereupon observed:

'I may inform the House that I had a very serious discussion about this in London. I do not want to disclose the name of the person with whom I had a discussion. I was told that a ruling, right or wrong, has got to be respected at the time it is given and if, on second thought the Hon. Speaker finds subsequently that the ruling is not correct, it is his duty to revise it and give a revised ruling."

ನಾನು ಮಾತನಾಡಿ ಮುಗಿಸುವವರೆಗೆ ದಯವಿಟ್ಟು ಯಾರೂ ಮಾತನಾಡಬೇಡಿ. ಇದನ್ನು ಮತ್ತೆ ರಿವೈಸ್ಡ್ ಮಾಡತಕ್ಕಂಥ ಪ್ರಮೇಯವಿಲ್ಲ. ಅನೇಕ ಸಲ ನನ್ನ ಕಛೇರಿಯಲ್ಲಿ ನಿಯಮ 69ಕ್ಕೆ ಕನ್ಸರ್ಟ್ ಮಾಡಿ ಚರ್ಚೆ ಮಾಡುವುದಕ್ಕೆ ತಾವೆಲ್ಲರೂ ಒಪ್ಪಿಕೊಂಡಿದ್ದೀರಿ. I know this is an important subject. You 'can't question the ruling of the speaker. It is not a wrong ruling. I have given a correct ruling.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ನಾವು ನಿಮಗೆ ಅಪ್ರೈಸ್ ಮಾಡುತ್ತಿದ್ದೇವೆ.

ಅಧ್ಯಕ್ಷರು : ಮತ್ತೆ ಬ್ರೀಫ್ ಮಾಡತಕ್ಕಂಥದ್ದು ಬೇಡ. ಇದಕ್ಕೆ ಮತ್ತೆ ಸಮಯ ವೇಸ್ಟ್ ಆಗುತ್ತದೆ. ಆದ್ದರಿಂದ ನೇರವಾಗಿ ಈ ವಿಷಯದ ಬಗ್ಗೆ ಮಾತನಾಡಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ನಾವು ನಿಮ್ಮ ಗಮನಕ್ಕೆ ತರುವುದೇನೆಂದರೆ, ತಾವು ಈಗಾಗಲೇ ರೂಲಿಂಗ್‌ನ್ನು ಓದಿದ್ದೀರಿ. ತಮ್ಮ ರೂಲ್ ಬಗ್ಗೆ ಖಂಡಿತ ನಮ್ಮದು ಎರಡು ಮಾತುಗಳಿಲ್ಲ. ಆದರೆ, Second thought ಬಗ್ಗೆ ಸಣ್ಣ ಶಬ್ದಗಳನ್ನು ಹೆಳಿದ್ದಾರೆ. ಕಳೆದ ಬಾರಿ ಕಂಬಾಲಪಲ್ಲಿಯಲ್ಲಿ ನಡೆದ ಘಟನೆ ಬಗ್ಗೆ ನಿಲುವಳಿ ಸೂಚನೆ ಅಡಿಯಲ್ಲಿ ಮಾತನಾಡುವುದಕ್ಕೆ ಇದೇ ಸದನದಲ್ಲಿ ಸರ್ಕಾರವೇ ಒಪ್ಪಿಕೊಂಡಿತ್ತು. ಈ ವಿಷಯ ಅದಕ್ಕಿಂತ ಹತ್ತು ಪಟ್ಟು ದೊಡ್ಡದು ಎನ್ನತಕ್ಕಂಥ ವಿಚಾರ ತಮಗೆ ಗೊತ್ತಿದೆ. ಕಳೆದ ಎರಡು ವರ್ಷಗಳಿಂದ ಇಡೀ ದೇಶದಾದ್ಯಂಥ ಈ ರೀತಿಯಾದ ಸಂಗತಿಗಳು ಆಗುತ್ತಿವೆ. ನಾವು ಈ ಸಂದರ್ಭದಲ್ಲಿ ವಿನಂತಿಮಾಡಿಕೊಳ್ಳುವುದು ಏನೆಂದರೆ, ಕಂಬಾಲಪಲ್ಲಿ ಘಟನೆಗಿಂತ ಇದು ಹತ್ತು ಪಟ್ಟು ದೊಡ್ಡದಾಗಿದೆ. ಮತ್ತೆ ರಾಜ್ಯ ಮತ್ತು ದೇಶದ ಚರಿತ್ರೆಯಲ್ಲಿಯೇ ಇದು ಅತ್ಯಂಥ ದೊಡ್ಡಪ್ರಕರಣವಾಗಿರುವುದರಿಂದ ಇದನ್ನು ನಿಲುವಳಿ ಸೂಚನೆಯಡಿಯಲ್ಲಿ ಚರ್ಚೆ ಮಾಡುವುದಕ್ಕೆ ತಾವು ಒಪ್ಪಿಕೊಳ್ಳಬೆಕೆಂದು ನಾವು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇವೆ. ಆದ್ದರಿಂದ ಆ ಸೆಕೆಂಡ್ ಥಾಟ್ ಏನಿದೆ ಆ ಶಬ್ದವನ್ನು ಗಣನೆಗೆ

ತೆಗೆದುಕೊಂಡು ಮತ್ತೆ ರಿವ್ಯೂ ಮಾಡಿ ಇದನ್ನು ನಿಲುವಳಿ ಸೂಚನೆ ಅಡಿಯಲ್ಲಿ ದಯವಿಟ್ಟು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇವೆ.

ಅಧ್ಯಕ್ಷರು : ತಾವು ಹೇಳತಕ್ಕಂಥ ಇಂಟ್ರೆಸ್ಟ್‌ನಲ್ಲಿಯೇ ಅವರು ಏನು ಬ್ರೀಫ್ ಮಾಡುತ್ತಾರೆಯೋ ಅದು ಮುಖ್ಯವೆಂದು ನನಗೆ ಅರ್ಥವಾಗಿದೆ. ಈ ವಿಷಯದ ಬಗ್ಗೆ ನೇರವಾಗಿ ಮಾತನಾಡುವುದಕ್ಕೆ ಅವಕಾಶ ಕೊಡುವುದರಿಂದ ನಿಮಗೆ ಹೆಚ್ಚಿನ ಸಮಯ ಸಿಗುತ್ತದೆ. ಇದರ ಬಗ್ಗೆ ಆಲೋಚನೆ ಮಾಡಬೇಕು. ಈಗ ಮಾನ್ಯ ಜಗದೀಶ್ ಶೆಟ್ಟರ್‌ರವರು ತಮ್ಮ ಮಾತನ್ನು ಪ್ರಾರಂಭ ಮಾಡಿ.

ಶ್ರೀ ಸಿ.ಎಸ್. ನಾಡಗೌಡ ಅಪ್ಪಾಜಿ : ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಎಷ್ಟು ಕಾಲಾವಕಾಶ ಬೇಕಾದರೂ ಕೊಡಿ. ಮೂರು ದಿವಸಗಳು ಚರ್ಚೆ ಮಾಡುವುದಕ್ಕೆ ನಾವು ಸಿದ್ದರಿದ್ದೇವೆ. ಒಂದು ಅಥವಾ ಎರಡು ಗಂಟೆಯೊಳಗೆ ಬಹಳ ತರಾತುರಿಯಲ್ಲಿ ಚರ್ಚೆ ಮಾಡುವುದಕ್ಕೆ ನಾವು ತಯಾರಿಲ್ಲ. ಇದು ಬಹಳ ಸೂಕ್ಷ್ಮವಾಗಿರತಕ್ಕಂಥ ವಿಷಯವಾಗಿರುವುದರಿಂದ ಇದರಲ್ಲಿರತಕ್ಕಂಥ ಸತ್ಯಾಂಶ ಏನಿದೆ ಎನ್ನತಕ್ಕಂಥದ್ದು ಬೆಳಕಿಗೆ ಬರಬೇಕು ಎಂಬುದು ಸರ್ಕಾರದ ಇಚ್ಛೆ ಕೂಡ ಇದೆ. ಆದರೆ, ನಿಯಮ 69ಕ್ಕೂ ಮತ್ತು ನಿಲುವಳಿ ಸೂಚನೆಯಡಿಯಲ್ಲಿ ಚರ್ಚೆ ಮಾಡುವುದಕ್ಕೆ ಇರತಕ್ಕಂಥ ವ್ಯತ್ಯಾಸ ಏನೆಂದರೆ ಇದು ಹೆಲ್ತಿ ಪಾರ್ಟಿಸಿಪೇಶನ್ ಆಗಬೇಕೆಂಬ ಉದ್ದೇಶದಿಂದ ತಾವು ಈಗಾಗಲೇ ಏನೊಂದು ರೂಲಿಂಗ್ ಕೊಟ್ಟಿದ್ದೀರಿ. ಅದನ್ನು ನಾವು ಸ್ವಾಗತ ಮಾಡುತ್ತೇವೆ.

Mr. Speaker : No. There is no further revision of this ruling

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅನುಮತಿ ಕೊಟ್ಟಿದ್ದೀರಿ. ಈ ಚರ್ಚೆಯಲ್ಲಿ ಆಡಳಿತ ಪಕ್ಷದ ಸದಸ್ಯರೂ ಕೂಡ ಭಾಗವಹಿಸುವುದಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಕು.

ಅಧ್ಯಕ್ಷರು : ಸರ್ಕಾರವನ್ನು ಕೆಳಿಯೇ ನನ್ನ ತೀರ್ಮಾನವನ್ನು ಕೊಟ್ಟಿದ್ದೇನೆ.

2) ನಿಯಮ 69ರ ಮೇರೆಗೆ ಚರ್ಚೆ

ವಿಷಯ : ರಾಜ್ಯ ಹಾಗೂ ದೇಶದಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ನಕಲಿ ಛಾಪಾಕಾಗದ ಹಗರಣದ ಬಗ್ಗೆ ಚರ್ಚೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿದ ಪ್ರಕಾರ ಇದೊಂದು ಅಸಮಾನ್ಯವಾದಂಥ ಪ್ರಕರಣವಾಗಿದೆ. ಬಹುಶ: ನಮ್ಮ ರಾಷ್ಟ್ರದ ಮತ್ತು ರಾಜ್ಯದ ಇತಿಹಾಸವನ್ನು ತೆಗೆದು ನೋಡಿದಾಗ ಈ ರೀತಿಯಾದಂಥ ಅಂದರೆ, ಸಾವಿರಾರು ಕೋಟಿ ರೂಪಾಯಿಗಳ ಬೃಹತ್ ಭ್ರಷ್ಟಾಚಾರದ ಹಗರಣ ಇತಿಹಾಸದಲ್ಲಿಯೇ ಮೊಟ್ಟಮೊದಲು ಎಂದು ಹೇಳಬೇಕಾಗುತ್ತದೆ. ಇದರ ಮೂಲ ಪ್ರಾರಂಭವಾಗಿದ್ದೇ ಕರ್ನಾಟಕದಲ್ಲಿ ಇದರ ಮುಖ್ಯ ಅಪರಾಧಿಯಾದ ಕರೀಂಲಾಲ್ ಈ ಒಂದು ವ್ಯವಹಾರವನ್ನು ಕರ್ನಾಟಕದ ಮೂಲದಿಂದಲೇ ಪ್ರಾರಂಭ ಮಾಡಿದ್ದಾನೆ. ಮಹಾರಾಷ್ಟ್ರ ಇರಬಹುದು, ಇನ್ನಿತರ ರಾಜ್ಯಗಳಲ್ಲಿ ಸಹಿತ ಇದರ ಬೇರುಗಳು ಮುಟ್ಟಿರುವುದನ್ನು ನಾವು ನೋಡುತ್ತಿದ್ದೇವೆ. ಕಳೆದ ಎರಡು ವರ್ಷಗಳಿಂದ ಭಾರತೀಯ ಜನತಾ ಪಾರ್ಟಿ ವಿಧಾನಸಭೆಯಲ್ಲಿ ಇದರ ಬಗ್ಗೆ ಸಾಕಷ್ಟು ವಿಷಯಗಳನ್ನು ನಾವು ಬೆಳಕಿಗೆ ತೆಗೆದುಕೊಂಡು ಬಂದಿರುತ್ತೇವೆ. ಇದರ ಬಗ್ಗೆ